**ಸಿ ಸಿ ನಂ. 900/2020**

**ಸಿ.ಡಬ್ಲ್ಯೂ –2**
**ಪಿ ಡಬ್ಲೂ - 3**

**ಪ್ರಮಾಣ ವಚನ ಮಾಡಿದ ದಿನಾಂಕ ಃ 10-01-2023**

ದಿಃ 20-12-2022 ರಂದು ಆದ ಆದೇಶದಂತೆ ಪಿಡಬ್ಲ್ಯೂ - 3 ರವರ ಪಾಟೀ ಸವಾಲನ್ನು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು ಃ ಶ್ರೀ ಎಂ ಎಸ ಬಿ ಆರೋಪಿ ಪರ ವಕೀಲರಿಂದಃ

ನಾನು ಬಿ.ಕಾಂ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಖಾಯಂ ಆಗಿ ಎಂ .ಕೆ. ಹುಬ್ಬಳ್ಳಿಯಲ್ಲಿ ವಾಸಿಸುತ್ತೇನೆ ಎಂದರೆ ಸರಿ. ಚಾಸಾ 1 ರವರ ತಂಗಿಯನ್ನು ನನಗೆ ಮದುವೆ ಮಾಡಿದ್ದಾರೆ ಎಂದರೆ ಸರಿ. ನಿಪಿ 4 ಕ್ಕೆ ಸಹಿಯನ್ನು ದೊಡವಾಡ ಪೋಲಿಸ ಠಾಣೆಯಲ್ಲಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಒಂದು ಸಹಿ ಮಾತ್ರ ಮಾಡಿರುತ್ತೇನೆ. ನಾನು ಘಟನಾ ಸ್ಥಳದ ಮನೆಯ ಮುಂದೆ ನಿಪಿ 4 ಕ್ಕೆ ಸಹಿ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ಪಂಚನಾಮೆ ಮಾಡಲು ನನ್ನನ್ನು ಯಾರು ಕರೆಯಲು ಬಂದಿರುವುದಿಲ್ಲ ಆದರೆ ನಾನು ಆ ವೇಳೆಗೆ ಅಲ್ಲೇ ಇರುತ್ತೇನೆ. ನಾನು ನಿಪಿ 4 ಕ್ಕೆ ಸಹಿ ಮಾಡುವಾಗ ಬೆಳಿಗ್ಗೆ 9.00 ಗಂಟೆ ಆಗಿರುತ್ತದೆ. ಪೋಲಿಸರು ನಿಪಿ 4 ಕ್ಕೆ ಸಹಿ ಮಾಡು ಎಂದು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 4 ರಲ್ಲಿ ಏನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಪಂಚನಾಮೆಯನ್ನು ಹೀಗೆ ಮಾಡಬೇಕು ಎಂದು ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಆ ದಿನ ಸ್ಥಳದಲ್ಲಿ ನಿಪಿ 4 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ಇವುಗಳು ಘಟನಾ ಸ್ಥಳದ ಫೋಟೊಗಳು ಅಲ್ಲ ಎಂದರೆ ಸರಿಯಲ್ಲ. ಮುಮ -1 ರಿಂದ 3 ಇವು ಸಾಮಾನ್ಯವಾಗಿ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಮುಮ -1 ರಿಂದ 3 ನ್ನು ಈ ದಿನ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮ -1 ರಿಂದ 3 ಚಾಸಾ 1 ರವರ ಮನೆಯಲ್ಲಿ ಇದ್ದಂತಹ ಬಡಿಗೆಗಳು ಎಂದರೆ ಸರಿಯಲ್ಲ. ಮುಮ – 1 ರಿಂದ 3 ಇವುಗಳು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯು ಉಳ್ಳಾಗಡ್ಡಿಯವರ ಓಣಿ ಮತ್ತು ಹುರಕಡ್ಲಿಯವರ ಓಣಿ ಎಂಬಲ್ಲಿ ಬರುತ್ತದೆ. ಆ ದಿನ ಪೋಲಸಿರು ಘಟನಾ ಸ್ಥ..ಳಕ್ಕೆ ಬಂದು ನನ್ನ ಸಮಕ್ಷಮ ಪಂಚನಾಮೆ ಮಾಡಿ ಮುಮ -1 ರಿಂದ 3 ಇವುಗಳನ್ನು ವಶಪಡಿಸಿಕೊಂಡಿರುತ್ತಾರೆ ಎನ್ನುವದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ನಿಪಿ 4 ಕ್ಕೆ ದೊಡವಾಡ ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ನೀಡಿದ

ಸುಳ್ಳು  ದೂರಿಗೆ ಅನುಕೂಲವಾಗಲೆಂದು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ